ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 22-10-1970

*<u>ಪೂರ್ಣತೆಯ ಗುರುತು - ಕಲೆರಹಿತತೆ</u>* (फुल की निशानी – फ्लोलेस)

ಮಾಸ್ಟರ್ ತಿಳಿದಿವರಾಗಿದ್ದೀರಾ? ಮಾಸ್ಟರ್ ಜ್ಞಾನಪೂರ್ಣರಾಗಿದ್ದೀರಾ? ಮಾಸ್ಟರ್ ಆಗುವುದರಿಂದ ಎಲ್ಲಾ ಜ್ಞಾನವನ್ನು ತಿಳಿದಿರುವಿರಾ? ಮಾಸ್ಟರ್ ಜ್ಞಾನಪೂರ್ಣ, ಮಾಸ್ಟರ್ ಆಗಿರುವಿರೋ ಅಥವಾ ಆಗುತ್ತಿರುವಿರೋ? ಇನ್ನೂವರೆಗೂ ಆಗುತ್ತಿರುವಿರಾ? ಜ್ಞಾನ ಪೂರ್ಣರಾಗಿರುವಿರೋ ಅಥವಾ ಆಗುತ್ತಿರುವಿರೋ? ಜ್ಞಾನಪೂರ್ಣರಾಗಿರುವಿರೋ ಅಥವಾ ಆನಂದ ಪೂರ್ಣರಾಗುತ್ತಿರುವಿರೋ? ಆಗುತ್ತಿರುವಿರೋ ಅಥವಾ ಆಗಿರುವಿರೋ? (ಆಗುತ್ತಿರುವೆವು) ಎಲ್ಲಿಯವರೆಗೆ ಅಂತಿಮ ಸ್ಥಿತಿಯನ್ನು ಸಾಕಾರ ತಂದೆಯಲ್ಲಿ ನೋಡಿದಿರೋ ಅಲ್ಲಿಯವರೆಗೆ ಜ್ಞಾನಪೂರ್ಣ, ಆಗಿರುವಿರಾ? ಸಮಾನರಾಗುವುದರಲ್ಲಿ ಅಂತರವಿದೆ ಆದ್ದರಿಂದ ಪೂರ್ಣರಾಗಿಲ್ಲ. ಎಲ್ಲಿಯವರೆಗೆ ಸಾಕಾರ ತಂದೆಯ ಪೂರ್ಣರಾಗಬೇಕೆಂಬ ಉದಾಹರಣೆ ಸ್ಪಷ್ಟವಾಗಿದೆಯಲ್ಲವೇ? ಹೆಚ್ಚು ಮಾಸ್ಟರ್ ರಚಯಿತನ ನಶೆಯಲ್ಲಿ ಇರುತ್ತೀರೋ ಅಥವಾ ರಚನೆಯಲ್ಲೋ? ಯಾವ ನಶೆಯಲ್ಲಿ ಹೆಚ್ಚು ಸಮಯವಿರುತ್ತೀರಿ? ಇಂದು ಈ ಪ್ರಶ್ನೆಯನ್ನು ಏಕೆ ಕೇಳಿದೆವು ಇಂದು ಎಲ್ಲಿಯವರೆಗೆ ಕಲೆರಹಿತ(ಲೋಪವಿಲ್ಲದ) ಎಂದರೆ ಪೂರ್ಣರಾಗಿದ್ದಾರೆ ಎಂದು ಎಲ್ಲಾ ರತ್ನಗಳನ್ನು ನೋಡುತ್ತಿದ್ದೆವು ಮತ್ತು ಪರೀಕ್ಷಿಸುತ್ತಿದ್ದೆವು. ಪೂರ್ಣರಲ್ಲದಿದ್ದರೆ ಫೇಲ್ ಆಗುತ್ತೀರಿ. ಆದ್ದರಿಂದ ಇಂದು ಪೂರ್ಣ ಮತ್ತು ಫೇಲ್ ನ ರೇಖೆಯನ್ನು ನೋಡುತ್ತಿದ್ದೆವು. ಆಗ ಪೂರ್ಣರಾಗಿದ್ದೀರಾ ಎಂದು ಪ್ರಶ್ನೆಯನ್ನು ಕೇಳಿದೆವು. ಹೇಗೆ ತಂದೆಯ ಮಹಿಮೆ ಎಲ್ಲಾ ವಿಷಯಗಳಲ್ಲಿ ಪೂರ್ಣವೆಂದು ಇದೆಯೋ ಹಾಗೆ ಮಕ್ಕಳೂ ಮಾಸ್ಟರ್ ಜ್ಞಾನಪೂರ್ಣರಾಗಬೇಕು. ಕೇವಲ ಜ್ಞಾನದಲ್ಲಿ ಅಲ್ಲ ಆದರೆ ಮಾಸ್ಟರ್ ಜ್ಞಾನಪೂರ್ಣ. ಆದ್ದರಿಂದ ಪ್ರಶ್ನೆಯನ್ನು ಕೇಳಿದೆವು, ಮಾಸ್ಟರ್ ಆಗಿದ್ದೀರಲ್ಲವೇ? ಮಾಸ್ಟರ್ ಜ್ಞಾನಪೂರ್ಣ ಇದರಲ್ಲಿಯೂ ಇರಲಾಗುತ್ತದೆಯೇ? ತಮ್ಮವು ಎರಡು ಲೆಕ್ಕಗಳಿದ್ದರೆ ಬಾಪ್ ದಾದಾರವೂ ಎರಡು ರಹಸ್ಯಗಳಿವೆ.

ಇಂದು ಒಬ್ಬೊಬ್ಬರಲ್ಲಿ ಮೂರು ವಿಷಯಗಳನ್ನು ವಿಶೇಷ ರೂಪದಲ್ಲಿ ನೋಡುತ್ತಿದ್ದರು. ಇಂದು ಅಮೃತವೇಳೆಯಲ್ಲಿ ಏನನ್ನು ನೋಡಿದೆವೆಂಬ ದಿನಚರಿಯನ್ನು ಹೇಳುತ್ತಿದ್ದೇವೆ. ಇಂದು ಬಾಪ್ ದಾದಾ ಒಂದೊಂದು ರತ್ನದ ಮೂರು ವಿಷಯಗಳನ್ನು ನೋಡಿದರು, ಅವು ಯಾವವು? ಇದೂ ಒಂದು ಡ್ರಿಲ್ ಆಗಿದೆ. ಇಂದು ಮೂರು ಮಾತುಗಳನ್ನು ನೋಡುತ್ತಿದ್ದೆವು ಒಂದು ಪ್ರತಿಯೊಬ್ಬರ ಪ್ರಕಾಶ(ಲೈಟ್), ಎರಡನೆಯದು ಶಕ್ತಿ(ಮೈಟ್) ಮತ್ತು ಮೂರನೆಯದು ಹಕ್ಕು(ರೈಟ್), ರೈಟ್ ಶಬ್ದಕ್ಕೆ ಎರಡು ಅರ್ಥಗಳಿವೆ. ಯಥಾರ್ಥವಾದುದಕ್ಕೆ ರೈಟ್ ಎಂದು ಹೇಳುತ್ತಾರೆ, ಎರಡನೆಯದು ಅಧಿಕಾರಕ್ಕೆ ಹೇಳಲಾಗುತ್ತದೆ. ಅಧಿಕಾರಿಗಳು ಎಷ್ಟು ಆಗಿದ್ದೀರಿ, ಜೊತೆಗೆ ಯಥಾರ್ಥ ರೂಪದಲ್ಲಿ ಎಲ್ಲಿಯವರೆಗೆ ಇರುವಿರಿ. ಆದ್ದರಿಂದ ಲೈಟ್, ಮೈಟ್ ಮತ್ತು ರೈಟ್ ಈ ಮೂರನ್ನು ನೋಡುತ್ತಿದ್ದೆವು. ಯಾವ ಫಲಿತಾಂಶ ಬಂದಿತು ಎಂಬುದನ್ನು ಸಹ ಹೇಳುತ್ತೇವೆ. ಈಗ ಸೇವೆ ಬಹಳ ಮಾಡಿದ್ದೀರಲ್ಲವೇ? ಈಗ ಅದರ ಫಲಿತಾಂಶವನ್ನು ನೋಡುತ್ತಿದ್ದೇವೆ. ಇಲ್ಲಿಯವರೆಗೆ ಕೇವಲ ಪ್ರಚಾರದ ಫಲಿತಾಂಶವಿದೆ. ಪ್ರಚಾರದಲ್ಲಿ ಪಾಸಾಗಿದ್ದೀರಿ ಆದರೆ ಆತ್ಮರಿಗೆ ತಂದೆಯ ಸಮೀಪ ತರುವ ಆಹ್ವಾನವನ್ನು ಇನ್ನೂ ಮಾಡಬೇಕು. ಪ್ರಚಾರವಾಗಿದೆ. ಆದರೆ ಆತ್ಮರ ಆಹ್ವಾನವನ್ನು ಮಾಡಬೇಕು. ಆಹ್ವಾನ ಮಾಡುವುದು ಮತ್ತು ತಂದೆಯ ಸಮೀಪ ತರುವುದು ಈ ಪುರುಷಾರ್ಥ ಇನ್ನೂ ಉಳಿದಿದೆ. ಏಕೆಂದರೆ ತಮಗೂ ಸಹ ಶಬ್ದದಿಂದ ದೂರವಿರಲು ಇಚ್ಛೆಯಿದೆ, ಅಭ್ಯಾಸವಿಲ್ಲ. ಆದ್ದರಿಂದ ಶಬ್ದದಿಂದ ಪ್ರಚಾರವಾಗುತ್ತಿದೆ.ಆದರೆ ಎಷ್ಟು ತಾವು ಶಬ್ದದಿಂದ ದೂರವಾಗಿ ಸಂಪೂರ್ಣತೆಯ ಆಹ್ವಾನ ತಮ್ಮಲ್ಲಿ ತರುವಿರೋ ಅಷ್ಟು ಆತ್ಮರ ಆಹ್ವಾನ ಮಾಡಬಹುದು. ಈ ಆಹ್ವಾನ ಮಾಡುತ್ತಿರುವಿರಿ ಆದರೆ ಫಲಿತಾಂಶವಾಗಿದೆ, ಆತ್ಮರು ಬಂದುಹೋಗಿದ್ದಾರೆ. ಬಂದುಹೋಗುತ್ತಾರೆ. ಆದರೆ ಆಹ್ವಾನದ ನಂತರ ಆಹುತಿಯಾಗಬೇಕಾದ ಕೆಲಸ ಇನ್ನೂ ಇದೆ. ಜ್ಞಾನದ ಕಡೆಗೆ ಆಕರ್ಷಿತರಾಗುತ್ತಾರೆ ಆದರೆ ಜ್ಞಾನಪೂರ್ಣನೆಡೆಗೆ ಆಕರ್ಷಣೆ ಮಾಡಬೇಕು. ಇನ್ನೂವರೆಗೂ ಮಾಸ್ಟರ್ ರಚಯಿತ ಅಲ್ಲಲ್ಲಿ

ರಚನೆಯ ಆಕರ್ಷಣೆಯಲ್ಲಿ ಆಕರ್ಷಿತರಾಗುತ್ತಾರೆ. ಆದ್ದರಿಂದ ಯಾರು ಎಷ್ಟು ಮತ್ತು ಹೇಗೆ ಸ್ವಯಂ ಇದ್ದಾರೋ ಅಷ್ಟು ಅದೇ ರೀತಿಯ ಪ್ರಮಾಣ ಕೊಡುವರು. ಇಲ್ಲಿಯವರೆಗೆ ಶಕ್ತಿರೂಪ, ಶೂರವೀರತೆಯ ಸ್ವರೂಪ ಕಣ್ಣುಗಳಲ್ಲಿ ನಡೆನುಡಿಗಳಲ್ಲಿ ಇಲ್ಲ.

***ಶಕ್ತಿ ಅಥವಾ ಶೂರವೀರತೆಯ ಮುಖ ಯಾವುದೇ ಆಸುರೀ ಲಕ್ಷಣದವರು ಸಾಹಸವನ್ನು ಇಟ್ಟುಕೊಳ್ಳದ ರೀತಿಯಲ್ಲಿ ಕಂಡುಬರಬೇಕು. ಆದರೆ ಇನ್ನೂವರೆಗೂ ಆಸುರೀ ಲಕ್ಷಣದ ಜೊತೆಗೆ ಆಸುರೀ ಲಕ್ಷಣದವರೂ ಅಲ್ಲಲ್ಲಿ ಆಕರ್ಷಿತ ಮಾಡುತ್ತಾರೆ. ಅದನ್ನು ರಾಯಲ್ ಮಾಯೆಯ ರೂಪದಲ್ಲಿ ವಾತಾವರಣ ಆ ರೀತಿಯಿತ್ತು. ವಾಯುಮಂಡಲ ಆ ರೀತಿ ಇತ್ತು. ಅಥವಾ ಸಮಸ್ಯೆ ಆ ರೀತಿ ಇತ್ತು ಆದ್ದರಿಂದ ಸೋತೆವು ಎಂದು ಹೇಳುತ್ತೀರಿ. ಕಾರಣ ಹೇಳುವುದು ಎಂದರೆ ತಮ್ಮನ್ನು ಕಾರಾಗೃಹದಲ್ಲಿ ಸೇರಿಸಿಕೊಂಡಂತೆ.*** ಈಗ ಸಮಯ ಕಳೆದುಹೋಗಿದೆ. ಈಗ ಕಾರಣವನ್ನು ಕೇಳುವುದಿಲ್ಲ. ಬಹಳ ಸಮಯ ಕಾರಣವನ್ನು ಕೇಳಿದೆವು ಆದರೆ ಈಗ ಪ್ರತ್ಯಕ್ಷ ಕಾರ್ಯ ನೋಡಬೇಕಾಗಿದೆಯೇ ಹೊರತು ಕಾರಣವನ್ನಲ್ಲ. ಈಗ ಸ್ವಲ್ಪ ಸಮಯದಲ್ಲಿಯೇ ಧರ್ಮರಾಜನ ರೂಪ ಪ್ರತ್ಯಕ್ಷ ಅನುಭವ ಮಾಡುವಿರಿ ಏಕೆಂದರೆ ಈಗ ಅಂತಿಮ ಸಮಯವಾಗಿದೆ. ಇಷ್ಟು ಸಮಯ ತಂದೆಯ ರೂಪದಲ್ಲಿ ಕಾರಣವನ್ನು ಕೇಳಿದರು, ಸ್ನೇಹವನ್ನು ಕೊಟ್ಟರು, ದಯೆ ತೋರಿಸಿದರು, ರಿಯಾಯಿತಿಯನ್ನೂ ಕೊಟ್ಟರು. ಆದರೆ ಈಗ ಇಂತಹ ದಿನಗಳು ಬಹಳ ಕಡಿಮೆ ಉಳಿದಿವೆ ಎಂದು ಅನುಭವ ಮಾಡುವಿರಿ. ಮತ್ತೆ ಒಂದು ಸಂಕಲ್ಪದ ತಪ್ಪಿನಿಂದ 100 ಪಟ್ಟು ದಂಡ ಹೇಗೆ ಸಿಗುವುದು ಎಂದು ಅನುಭವ ಮಾಡುವಿರಿ. ಈಗಲೇ ಮಾಡುವುದು ಮತ್ತು ಈಗಲೇ ಅದರ ಫಲ ಅಥವಾ ದಂಡ ಪ್ರತ್ಯಕ್ಷ ರೂಪದಲ್ಲಿ ಅನುಭವ ಮಾಡುವಿರಿ, ಆ ಸಮಯ ಬಹಳ ಬೇಗನೆ ಬರಲಿದೆ. ಆದರೂ ಬಾಪ್ ದಾದಾ ಸೂಚನೆಯನ್ನು ಕೊಡುತ್ತಿದ್ದಾರೆ ಏಕೆಂದರೆ ಬಾಪ್ ದಾದಾ ಮಕ್ಕಳ ಸ್ನೇಹಿಯಾಗಿದ್ದಾರೆ.

ಈಗ ಮಾಸ್ಟರ್ ರಚಯಿತನ ನಶೆಯನ್ನು ಧಾರಣೆ ಮಾಡಿಕೊಂಡು ರಚನೆಯ ಸರ್ವ ಆಕರ್ಷಣೆಯಿಂದ ತಮ್ಮನ್ನು ದೂರ ಮಾಡಿಕೊಳ್ಳಿ. ತಂದೆಯ ಮುಂದೆ ರಚನೆಯಾಗಿದ್ದೀರಿ ಆದರೆ ಮಾಸ್ಟರ ರಚಯಿತ, ಮಾಸ್ಟರ್ ಜ್ಞಾನಪೂರ್ಣರಾಗಿ ಆ ಶಕ್ತಿಶಾಲಿ ಸ್ಥಿತಿಯಲ್ಲಿ ಸ್ಥಿತರಾಗಿರದಿದ್ದರೆ ರಚನೆ ಮತ್ತೂ ಭಿನ್ನಭಿನ್ನ ರೂಪ-ರಂಗ ರಚಿಸುವಂತಹ ಸಮಯ ಈಗ ಬರಲಿದೆ. ಆದ್ದರಿಂದ ಪೂರ್ಣರಾಗಲು ನಿಮ್ಮ ಸ್ಥಿತಿಯಲ್ಲಿ ಪೂರ್ಣ ಸ್ಥಿತರಾಗಿ ಆಗ ಎಲ್ಲಿಯೂ ಫೇಲ್ ಆಗುವುದಿಲ್ಲ. ಈಗ ಬಾಲ್ಯದ ತಪ್ಪುಗಳು, ಹುಡುಗಾಟಿಕೆಯ ತಪ್ಪುಗಳು, ಆಲಸ್ಯದ ತಪ್ಪುಗಳು, ಬೇಜವಾಬ್ದಾರಿಯ ತಪ್ಪುಗಳು ಇನ್ನೂ ಉಳಿದಿವೆ. ಈ ನಾಲ್ಕು ಪ್ರಕಾರದ ತಪ್ಪುಗಳನ್ನು ಸತ್ಯಯುಗದ ಜಗತ್ತಿನಲ್ಲಿ ಮರೆಯುವಂತೆ ಮರೆತುಬಿಡಿ. ಆದ್ದರಿಂದ ತಮ್ಮ ಶಕ್ತಿಶಾಲಿ ಶಕ್ತಿಸ್ವರೂಪ, ಶಸ್ತ್ರಧಾರಿ ಸ್ವರೂಪ, ಸದಾ ಬೆಳಗುತ್ತಿರುವ ಜ್ಯೋತಿ ಸ್ವರೂಪವನ್ನು ಪ್ರತ್ಯಕ್ಷ ರೂಪದಲ್ಲಿ ತೋರಿಸಿ. ಈಗ ತಮ್ಮ ಭಕ್ತರು ಗುಪ್ತ ವೇಷಧಾರಿ ದೇವತೆಗಳನ್ನು ಮತ್ತೆ ಪಡೆಯಲು ಪರಿತಪಿಸುತ್ತಿದ್ದಾರೆ. ತಮ್ಮ ಸಂಪೂರ್ಣ ಮೂರ್ತಿ ಪ್ರತ್ಯಕ್ಷವಾದಾಗ ತಮ್ಮ ಭಕ್ತರು ಪ್ರತ್ಯಕ್ಷ ರೂಪದಲ್ಲಿ ತಮ್ಮ ಇಷ್ಟದೇವರನ್ನು ಪಡೆಯುವರು. ಈಗಂತೂ ಅನೇಕ ಪ್ರಕಾರದವರಿದ್ದಾರೆ. ಭಲೇ ಶಬ್ದ ಕೇಳುವರು ಆದರೆ ಒಂದು ಕಡೆಗೆ ಆಸುರಿ ಆತ್ಮರ ಶಬ್ದ, ಆಕರ್ಷಣೆ ಪೂರ್ಣಬಲದಿಂದ ಆಗುವುದು. ಇನ್ನೊಂದು ಕಡೆಗೆ ತಮ್ಮ ಭಕ್ತರ ಶಬ್ದವೂ ಅನೇಕ ಪ್ರಕಾರದಿಂದ ಮತ್ತು ಪೂರ್ಣಬಲದಿಂದ ಆಗುವುದು ಎಂಬುದನ್ನೂ ನೆನಪಿಡಿ. ಈಗ ಪ್ರತ್ಯಕ್ಷ ರೂಪದಲ್ಲಿ ಏನನ್ನು ತರಬೇಕು ಮತ್ತು ಏನನ್ನು ತರಬಾರದು ಅದನ್ನು ಗುರುತಿಸುವುದು ಬುದ್ಧಿಯ ಕೆಲಸವಾಗಿದೆ. ಆದ್ದರಿಂದ ಈಗ ರಿಯಾಯತಿಯ ಸಮಯ ಹೋಯಿತು. ಈಗ ಆತ್ಮೀಯತೆಯ ಸಮಯವಾಗಿದೆ, ಆತ್ಮೀಯತೆಯಿಲ್ಲದಿದ್ದರೆ ಭಿನ್ನ ಭಿನ್ನ ಪ್ರಕಾರದ ಮಾಯೆಯ ಬಣ್ಣಗಳು ಬರುವವು. ಆದ್ದರಿಂದ ಇಂದು ಬಾಪ್ ದಾದಾ ಅದರ ಸೂಚನೆ ಕೊಡುತ್ತಿದ್ದಾರೆ.

ಮಿಲಿಟರಿ ಮಾರ್ಶಲ್ ಒಂದು ಸೀಟಿ ಹೊಡೆಯುತ್ತಾನೆ ನಂತರ ಕೊನೆಯ ಸೀಟಿ ಅಂತಿಮವಾಗುತ್ತದೆ. ಆದ್ದರಿಂದ ಇಂದು ನಾಜೂಕ ಸಮಯದ ಸೂಚನೆಯ ಮೊದಲ ಸೀಟಿಯಾಗಿದೆ, ಸೀಟಿ ತಯಾರಾಗಲು ಹೊಡೆಯುತ್ತಾರೆ. ಆದ್ದರಿಂದ ಈಗ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳಿಗೆ ತಯಾರಾಗಿ. ಬಾಪ್ ದಾದಾ ಇಬ್ಬರೂ ಅವ್ಯಕ್ತರಾಗಿದ್ದಾರೆ, ನಾವು ವ್ಯಕ್ತದಲ್ಲಿ ಏನನ್ನಾದರೂ

ಮಾಡಬಹುದು ಎಂದು ತಿಳಿಯಬೇಡಿ. ಪ್ರತಿಯೊಬ್ಬರ ಒಂದೊಂದು ಕ್ಷಣದ, ಸಂಕಲ್ಪದ ಚಿತ್ರ ಅವ್ಯಕ್ತ ವತನದಲ್ಲಿ ಸ್ಪಷ್ಟವಾಗುತ್ತಿರುತ್ತದೆ. ಆದ್ದರಿಂದ ಬೇಜವಾಬ್ದಾರ ಆಗಬೇಡಿ. ಈಶ್ವರೀಯ ಮರ್ಯಾದೆಗಳಲ್ಲಿ ಬೇಜವಾಬ್ದಾರರಾಗಬೇಡಿ. ಆಸುರಿ ಮಾರ್ಯಾದೆಗಳು ಅಥವಾ ಮಾಯೆಗೆ ಬೇಜವಾಬ್ದಾರರಾಗಿ ಆದರೆ ಈಶ್ವರೀಯ ಮರ್ಯಾದೆಗಳಿಗಲ್ಲ. ಬೇಜವಾಬ್ದಾರಿಯ ಕೆಲವು ಪ್ರವಾಹ ವತನಕ್ಕೆ ತಲುಪುತ್ತದೆ. ಆದ್ದರಿಂದ ಇಂದು ಬಾಪ್ ದಾದಾ ಮತ್ತೊಮ್ಮೆ ನೆನಪು ಮಾಡಿಸುತ್ತಿದ್ದಾರೆ. ಸಮಸ್ಯೆಗಳನ್ನು ದೂರ ಓಡಿಸಬೇಕು ಮತ್ತು ಸಂಪೂರ್ಣತೆಯನ್ನು ಸಮೀಪ ತರಬೇಕು. ಕೆಲವೊಮ್ಮೆ ಸಂಪೂರ್ಣತೆಯ ಬದಲು ಸಮಸ್ಯೆಗಳನ್ನು ಬಹಳ ಸಮ್ಮುಖದಲ್ಲಿ ಇಟ್ಟುಕೊಳ್ಳುತ್ತೀರಿ. ಸಮಸ್ಯೆಗಳನ್ನು ಎದುರಿಸಿದರೆ ಅವು ಸಮಾಪ್ತಿಯಾಗುವವು. ಎದುರಿಸಲು ಬರುವುದಿಲ್ಲ. ಆಗ ಒಂದು ಸಮಸ್ಯೆಯಿಂದ ಅನೇಕ ಸಮಸ್ಯೆಗಳು ಬರುತ್ತವೆ. ಹುಟ್ಟಿದರೆ ಅಲ್ಲಿಯೇ ನಾಶವಾಗಬೇಕು ಆದರೆ ವೃದ್ಧಿಯಾಗಬಾರದು. ಸಮಸ್ಯೆಯನ್ನು ಬೇಗನೆ ಸಮಾಪ್ತಿ ಮಾಡಿದರೆ ವಂಶ ಉತ್ಪನ್ನವಾಗುವುದಿಲ್ಲ. ಅಂಶ ಉಳಿದರೆ ವಂಶವಾಗುವುದು. ಅಂಶವನ್ನೇ ನಾಶ ಮಾಡಿದರೆ ವಂಶ ಎಲ್ಲಿಂದ ಬರುವುದು. ಸಮಸ್ಯೆಗಳ ಜನ್ಮವನ್ನು ನಿಯಂತ್ರಣ ಮಾಡಬೇಕು, ತಿಳಿಯಿತೇ? ಈಗ ಸಂಕೇತದಿಂದ ಹೇಳುತ್ತಿದ್ದೇವೆ ನಂತರ ಎಲ್ಲವೂ ಪ್ರತ್ಯಕ್ಷ ರೂಪದಲ್ಲಿ ತಮ್ಮ ಸ್ಥಿತಿ ಹೇಳುವುದು. ಬಚ್ಚಿಡಲಾಗುವುದಿಲ್ಲ. ಹೇಗೆ ನಾರದನ ಮುಖ ಸಭೆಯಲ್ಲಿ ಬಚ್ಚಿಡಲಾಯಿತೇ? ಈಗ ತಂದೆ ಗುಪ್ತವಾಗಿಡುತ್ತಾರೆ ಆದರೆ ಸ್ವಲ್ಪ ಸಮಯದ ನಂತರ ಅದು ಮತ್ತೆ ಗುಪ್ತವಾಗಿರುವುದಿಲ್ಲ. ಅವರ ಮುಖ ಸ್ಥಿತಿಯನ್ನು ಪ್ರತ್ಯಕ್ಷ ಮಾಡುವುದು. ಇತ್ತೀಚೆಗೆ ವಿಜ್ಞಾನದಲ್ಲಿ ಹೇಗೆ ಯಾವುದೇ ಗುಪ್ತ ವಸ್ತು ಸ್ವತಃ ಪ್ರತ್ಯಕ್ಷವಾಗಲಿ ಎಂದು ಆವಿಷ್ಕಾರ ಮಾಡುತ್ತಿರುತ್ತಾರೆಯೋ ಹಾಗೆ ಶಾಂತಿಯ ಶಕ್ತಿಯೂ ಸ್ವತಃ ಪ್ರತ್ಯಕ್ಷ ರೂಪದಲ್ಲಿ ಆಗುವುದು. ಹೇಳುವುದರಿಂದ ಅಥವಾ ಕೇಳುವುದರಿಂದ ಆಗುವುದಿಲ್ಲ, ತಿಳಿಯಿತೇ?.

ಆದ್ದರಿಂದ ಭವಿಷ್ಯ ಸಮಯದ ಸೂಚನೆ ಕೊಡುತ್ತಿದ್ದಾರೆ. ಆದ್ದರಿಂದ ಈಗ ನಾಜೂಕ ಸಮಯವನ್ನು ಎದುರಿಸಲು ನಾಜೂಕುತನವನ್ನು ಬಿಡಬೇಕು. ಆಗಲೇ ನಾಜೂಕು ಸಮಯವನ್ನು ಎದುರಿಸಬಹುದು. ಒಳ್ಳೆಯದು. ಹರ್ಷಿತ ಮುಖತೆಯಿರುವ ಗುಣ ಪುರುಷಾರ್ಥದಲ್ಲಿ ಬಹಳ ಸಹಯೋಗಿಯಾಗಬಹುದು. ಮುಖ ಹರ್ಷಿತವಾಗಿರುವಂತೆ ಆತ್ಮವೂ ಸದಾ ಹರ್ಷಿತವಾಗಿರಲಿ. ಈ ನೈಜ ಗುಣವನ್ನು ಆತ್ಮನಲ್ಲಿ ತರಬೇಕು. ಸದಾ ಹರ್ಷಿತರಾಗಿದ್ದರೆ ಮಾಯೆಯ ಯಾವ ಆಕರ್ಷಣೆಯೂ ಇರುವುದಿಲ್ಲ. ಇದು ತಂದೆಯ ಗ್ಯಾರಂಟಿಯಾಗಿದೆ ಆದರೆ ಆತ್ಮನನ್ನು ಯಾವಾಗಲೂ ಹರ್ಷಿತವಾಗಿಟ್ಟರೆ ಮಾತ್ರ ಅದು ಸಾಧ್ಯ. ಆದ್ದರಿಂದ ಆದಿಯನ್ನು ಅನಾದಿ ಮಾಡಿ, ಅನಾದಿಯಾದಾಗ ಮಾಯೆಯ ಆಕರ್ಷಣೆಯಾಗುವುದಿಲ್ಲ. ಸಮಸ್ಯೆಗಳು ಆಕ್ರಮಣ ಮಾಡುವುದಿಲ್ಲ. ತಂದೆಯ ಸ್ನೇಹ ಸ್ಥಿತಿಯಲ್ಲಿದ್ದಾಗ ಸರ್ವಶಕ್ತಿವಂತನ ಸ್ನೇಹ ಸಮ್ಮುಖದಲ್ಲಿದ್ದಾಗ ಸಮಸ್ಯೆ ಏನಾಗಿದೆ? ಎಲ್ಲಿಯ ಆ ಸ್ನೇಹ ಎಲ್ಲಿಯ ಆ ಸಮಸ್ಯೆ ಅದು ಸಾಸಿವೆ ಮತ್ತು ತಂದೆಯ ಸ್ನೇಹ ಗುಡ್ಡ, ಇಷ್ಟು ಅಂತರವಿದೆ. ಹಾಗಾದರೆ ಅನಾದಿ ರತ್ನವಾಗಲು ಸರ್ವಶಕ್ತಿವಂತನ ಶಕ್ತಿ ಮತ್ತು ಸ್ನೇಹವನ್ನು ಸದಾ ಜೊತೆಗಿಟ್ಟುಕೊಳ್ಳಿ. ಎಂದೂ ಒಬ್ಬಂಟಿಯಾಗಿದ್ದೇನೆ ಎಂದು ತಿಳಿಯಬೇಡಿ. ಜೀವನ ಜೊತೆಗಾರನಿಲ್ಲದೇ ಒಂದು ಕ್ಷಣವೂ ಇರದಿರಲಿ. ಸ್ನೇಹಿ ಜೊತೆಗಾರರು ಬೇರೆಯಾಗಿ ಇರುವುದಿಲ್ಲ. ಮಾಯೆ ಜೊತೆಗಾರನನ್ನು ಜೊತೆಗೆ ಇಟ್ಟುಕೊಳ್ಳದ ಕಾರಣ, ಒಂಟಿಯಾಗಿ ಇರುವುದರಿಂದ ಗೆದ್ದುಬಿಡುತ್ತದೆ. ಒಳ್ಳೆಯದು.

ಅವ್ಯಕ್ತ ಮುರಳಿ 22-10-1970

***ಪೂರ್ಣತೆಯ ಗುರುತು-ಕಲೆ ರಹಿತತೆ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಿ ಧಾರಣೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯ ಸಮಾನವಾದ ಮಾಸ್ಟರ್ ಜ್ಞಾನ ಪೂರ್ಣನು.

2. ನಾನು ಲೈಟ್ (ಪ್ರಕಾಶ), ಮೈಟ್ (ಶಕ್ತಿ), ರೈಟ್ (ಅಧಿಕಾರಿ ಮತ್ತು ಯತಾರ್ಥತೆ), ಈ ಮೂರು ಗುಣಗಳನ್ನು ಸಂಪೂರ್ಣವಾಗಿ ಧಾರಣೆ ಮಾಡಿದ್ದೇನೆ.

3. ನಾನು ಶಬ್ದದಿಂದ ಅತೀತವಾಗಿ ಸಂಪೂರ್ಣವಾಗಿ ತಯಾರಾಗಿ, ಆತ್ಮರನ್ನು ಆಹ್ವಾನ ಮಾಡಿ ತಂದೆಗೆ ಸಮೀಪ ತಂದಿದ್ದೇನೆ.

4. ನಾನು ಸರ್ವ ಆತ್ಮರನ್ನು ಜ್ಞಾನ ಪೂರ್ಣನೆಡೆಗೆ ಆಕರ್ಷಿತ ಮಾಡಿದ್ದೇನೆ.

5. ನಾನು ನನ್ನ ರಚನೆಯ ಸರ್ವ ಆಕರ್ಷಣೆಯಿಂದ ಅತೀತವಾಗಿರುವ ಮಾಸ್ಟರ್ ರಚಯಿತನು.

6. ನಾನು ಶಕ್ತಿಶಾಲಿ ಸ್ವರೂಪ, ಶಸ್ತ್ರಧಾರಿ ಸ್ವರೂಪ ಮತ್ತು ಸದಾ ಬೆಳಗುತ್ತಿರುವ ಜ್ಯೋತಿ ಸ್ವರೂಪವನ್ನು ಪ್ರತ್ಯಕ್ಷದಲ್ಲಿ ತೋರಿಸಿದ್ದೇನೆ.

7. ನಾನು ಆತ್ಮೀಯತೆಯಿಂದ ಭಿನ್ನ-ಭಿನ್ನವಾದ ಮಾಯೆಯ ಬಣ್ಣಗಳನ್ನು ಸಮಾಪ್ತಿ ಮಾಡಿದ್ದೇನೆ.

8. ನಾನು ಸಮಸ್ಯೆಯನ್ನು ಬೇಗನೆ ಎದುರಿಸಿ ಸಮಾಪ್ತಿ ಮಾಡಿ ಅದರ ವಂಶವನ್ನು ನಿಯಂತ್ರಣ ಮಾಡಿದ್ದೇನೆ.

9. ನಾನು ಹರ್ಷಿತ ಮುಖತೆಯಿಂದ ಪುರುಷಾರ್ಥದಲ್ಲಿ ಸಹಯೋಗವನ್ನು ಪಡೆದಿದ್ದೇನೆ.

10. ನಾನು ಸರ್ವಶಕ್ತಿವಂತನ ಶಕ್ತಿ ಮತ್ತು ಸ್ನೇಹವನ್ನು ಸದಾ ಜೊತೆಗೆ ಇಟ್ಟುಕೊಂಡು ಮಾಯೆಯ ಸರ್ವ ಆಕರ್ಷಣೆಯಿಂದ ಮುಕ್ತಿಯನ್ನು ಪಡೆದಿದ್ದೇನೆ.